'ಮೊದ್ಲು ನಿಮ್ಮಮ್ಮನ ಚಿಕಿತ್ಸೆಗೆ ವ್ಯವಸ್ಥೆಯಾಗ್ಬೇಕು ಋತು. ನಿನ್ನ, ರಮ್ಯಾಳ ಮದುವೆಗೆ ಒಂದು ಒಳ್ಳೆಯ ಮುಹೂರ್ತವನ್ನು ನೋಡ್ಬೇಕು, ಇಷ್ಟು ದಿನ ಯೋಗಿಯಾಗಿದ್ದ ನಾನು ಸಂಸಾರಿಯಾಗ್ಬಿಟ್ಟೆ...' ಹರಿಕೃಷ್ಣರು ನಗುತ್ತಾ ತಮ್ಮ ಬಿಳಿಗಡ್ಡವನ್ನು ನೀವಿಕೊಂಡರು.

ಅವರೆಲ್ಲರೂ ಹೊರಟುಹೋದ ಮೇಲೆ ಕೋಟೆ ಬಂಗಲೆ ಬರಿದಾದಂತೆನಿಸಿತು ಋತುವಿಗೆ. ಆದರೆ ಅಪ್ಪಾಜಿ ಮೊದಲಿದ್ದ ಅದೇ ಪ್ರೀತಿಯಿಂದ ತಾಯಿಯನ್ನು ಸ್ವೀಕರಿಸಿದ್ದು ಆಶ್ಚರ್ಯವನ್ನು ತಂದಿತು. ನಿಜವಾದ ಪ್ರೀತಿಯೆಂದರೆ ಅದೇ ಇರಬೇಕು. ಎಂಥ ಪರಿಸ್ಥಿತಿ ಬಂದರೂ ಅದು ಮುಕ್ಕಾಗದು ಎಂದುಕೊಂಡಳು ತನ್ನಲ್ಲೇ. ಅವರೆಲ್ಲಾ ಹೊರಟ ಮೇಲೆ ಕಲಾವತಿ ತಾನೇ ಮುಂದಾಗಿ ಋತು ಹೇಮಂತರ ಏಕಾಂತಕ್ಕೆ ಅನುವು ಮಾಡಿಕೊಟ್ಟಳು.

ಸಂಜೆಯ ಇಳಿಬಿಸಿಲು ಕೋಟೆ ಬಂಗಲೆಗೆ ಹೊಂಬಣ್ಣದ ಸ್ಪರ್ಶ ನೀಡಿದ್ದರೆ, ಮಾರ್ಗಶಿರ ಮಾಸದ ಕುಳಿರ್ಗಾಳಿ ಹಿತವಾಗಿ ಬೀಸತೊಡಗಿತ್ತು. ಬಂಗಲೆಯ ಅಸಂಖ್ಯ ಹಕ್ಕಿಗಳ ಚಿಲಿಪಿಲಿ ಕಿವಿಗಳಲ್ಲಿ ಪ್ರತಿಧ್ವನಿಸತೊಡಗಿತ್ತು. ಹೂ ಕುಂಡ ಗಳಲ್ಲಿ ಅರಳಿಕೊಂಡಿದ್ದ ಬಣ್ಣಬಣ್ಣದ ಹೂಗಳು ಬೀಸುಗಾಳಿಗೆ ಓಲಾಡುತ್ತಾ ಹಿತವಾದ ಪರಿಮಳವನ್ನು ಹೊರಸೂಸುತ್ತಿದ್ದವು.

ಋತು ತಲೆಯೆತ್ತಿ ತನ್ನವನನ್ನು ನೋಡಿದಳು. ಅವನ ಗುಂಗುರು ಕೂದಲು, ಆತ್ಮವಿಶ್ವಾಸವನ್ನು ಬೀರುವ ಕಣ್ಣುಗಳು....ಎಲ್ಲದಕ್ಕೂ ಹೆಚ್ಚಾಗಿ ಮುಖದ ಮೇಲೆ ಎಂದೂ ಮಾಸದ ಮಂದಹಾಸ....ಅವಳಿಗೆ ಶ್ರೀನಿವಾಸ ಕಲ್ಯಾಣದ ಆ ಶ್ರೀನಿವಾಸನ ನೆನಪಾಯಿತು.

ಹೇಮಂತನೂ ತನ್ನನ್ನೇ ದಿಟ್ಟಿಸುತ್ತಿರುವ ಚೆಲುವೆಯತ್ತ ನೋಡಿದ. ಬೊಗಸೆ ಕಂಗಳ ಬೆಳದಿಂಗಳಿನಂತಹ ಹುಡುಗಿ....ತನಗಾಗಿ ಪ್ರೇಮ ತಪಸ್ಸು ಮಾಡಿ ತನ್ನನ್ನು ಪಡೆದ ಪದ್ಮಾವತಿ... ಆ ಜೋಡಿ ಜೀವಗಳು ಹದಿಮೂರು ವರ್ಷಗಳ ಪ್ರೇಮ ತಪಸ್ಸಿನ ನಂತರ ನಾನಾ ಅಡೆತಡೆಗಳನ್ನು ಎದುರಿಸಿ ಈಗ ಒಂದಾಗುತ್ತಿದ್ದವು.

'ಋತು....ನೀನಿನ್ನು ನನ್ನವಳು, ನನ್ನ ಪ್ರಾಣವನ್ನು ಕೊಟ್ಟಾದರೂ ಸರಿ ನಿನ್ನನ್ನು ನಾನು ಕಾಪಾಡಿಕೊಳ್ತೀನಿ....' ಹೇಮಂತ ಬಡಬಡಿಸಿದಾಗ ಅವನ ಮಾತು ಗಳನ್ನು ತಡೆಯುವಂತೆ ಋತು ಅವನ ತುಟಿಗಳ ಮೇಲೆ ತನ್ನ ತೋರು ಬೆರಳನ್ನಿಟ್ಟಳು.

'ಇನ್ಮೇಲೆ ಇಂಥಾ ಮಾತುಗಳನ್ನು ನೀನು ಆಡ್ಬಾರ್ದು ಹೇಮಂತ್, ನಾವು ಒಬ್ಬರಿಗಾಗಿ ಮತ್ತೊಬ್ರು ಹುಟ್ಟಿ ಬಂದಿದ್ದೀವಿ, ಇನ್ಮೇಲೆ ನಮ್ಮ ಬದುಕಿನಲ್ಲಿ ಪ್ರೀತಿಯ ಚಿಲಿಪಿಲಿ ಮಾತ್ರ ಕೇಳ್ತಿರುತ್ತೆ, ಕೋಟೆ ಬಂಗಲೆಯ ಹಕ್ಕಿಗಳ ಚಿಲಿಪಿಲಿಯ ಹಾಗೆ...'. ಎನ್ನುತ್ತಾ ಹರವಾದ ಅವನೆದೆಗೊರಗಿ ಋತು ತನ್ಮಯತೆಯಿಂದ ಕಣ್ಮುಚ್ಚಿದಳು. ಅವನ ಹೃದಯದ ಪ್ರೇಮದ ಬಡಿತ ಅವಳಿಗೆ ಸ್ಪಷ್ಟವಾಗಿ ಕೇಳಿತು.

ಹೇಮಂತನೂ ಅವಳನ್ನು ಗಾಢವಾಗಿ ಅಪ್ಪಿಕೊಂಡು ಕಂಪಿಸುತ್ತಿರುವ ಅವಳ ಚೆಂದುಟಿಗಳನ್ನು ಮೃದುವಾಗಿ ಚುಂಬಿಸಿದ. ಅವಳು ಅವನಲ್ಲಿ ಕರಗಿ ಹೋದಳು. ಇದುವರೆಗೆ 'ಮೌನ ಮಂಟಪ'ವಾಗಿ ನರಳುತ್ತಿದ್ದ ಕೋಟೆ ಬಂಗಲೆ ಈಗ 'ಶೃಂಗಾರ ಮಂಟಪ' ವಾಗಿ ಕಂಗೊಳಿಸತೊಡಗಿತ್ತು.

(ಮುಗಿಯಿತು)

---

# ಹೊಸ ಧಾರಾವಾಹಿ

ಹೆಸರಾಂತ ಕಥೆಗಾರ **ಟಿ. ತಿಮ್ಮಪ್ಪ** ಅವರ



## ಪ್ರೀತಿ ಪ್ರೇಮ ಭ್ರಾಮ

ಅನುಪಮ ಸುಂದರಿ ಹೇಮಾವತಿ ಮನಸಾರೆ ಪ್ರೀತಿಸಿದ್ದು ಸುನಿಲ್ ಕುಮಾರನನ್ನು. ಆದರೆ ಆತನೇಕೆ ಆಕೆಯ ಪ್ರೀತಿಯನ್ನು ಮನ್ನಿಸಲಿಲ್ಲ? ಹೇಮಾವತಿಯನ್ನು ಮನಸ್ಸಿನೊಳಗೇ ಆರಾಧಿಸಿದ ಗಿರಿಧರ್ ತನ್ನ ಪ್ರೀತಿಯನ್ನು ಮನಸ್ಸು ಬಿಚ್ಚಿ ಹೇಳಲೇ ಇಲ್ಲ. ಭಗ್ನಪ್ರೇಮಿಯಾದ ಗಿರಿಧರ್ ಕೊನೆಗೆ ಯಾರನ್ನು ಮದುವೆಯಾದ? ಹೇಮಾವತಿ ಏನಾದಳು? ಪ್ರೀತಿ ಪ್ರೇಮಗಳ ಭ್ರಮಾಧೀನ ಲೋಕದಲ್ಲಿ ಯಾವ ಹೂವು ಯಾವ ಮುಡಿಗೆ? ಒಂದು ವಿಭಿನ್ನ ಪ್ರೇಮ ಕಥಾನಕ.

**ಮುಂದಿನವಾರ ಆರಂಭ**